ಮಂಜಿನ ಮೇಲಿನ ಹೆಸರು. ಹೆಸರಿನ ಕೆಳಗೆ ಬರೆದ ಅಡಿಗೆರೆ. ನೆನಪಾಗಿ ಕಾಡುವ ಬಣ್ಣ. ಹೆಸರು ಗೊತ್ತಿಲ್ಲದೆ ರಿಂಗಾಗುವ ಅನಾಮಿಕ ಕರೆ. ದೊರೆಯದೆಂದು ತಿಳಿದೂ ಬೇಡಿಕೊಳ್ಳುವ ಪ್ರಾರ್ಥನೆ! ನಿಜ ವಿಹಾರ್... ಜ್ಯೋತಿಯೆನ್ನುವುದು ನಿನ್ನ ಪಾಲಿಗೆ ವ್ಯಕ್ತಿಯಲ್ಲ. ಭೌತಿಕ ದೇಹವಲ್ಲ. ಅದೊಂದು ಆತ್ಮದಂತಹಾ ಅನುಭೂತಿ. ಅದು ನಿನ್ನೊಳಗಿನ ಅನುರಾಗವನ್ನು ಸಜೀವಗೊಳಿಸಿದ ಜೀವಜಲ. ಬೆಳಗ್ಗೆ ಭಾಸ್ಕರ ಮಾವ ನಮ್ಮ ಮದುವೆಯ ವಿಚಾರವನ್ನು ಪ್ರಸ್ತಾಪಿಸಿದಾಗ ನನಗೆ ಸಣ್ಣಗೆ ಆಘಾತವಾಯಿತು. ಪಕ್ಕದಲ್ಲೇ, ಪಡಸಾಲೆಯ ಕೋಣೆಯಲ್ಲೇ ಸುಳಿದಾಡಿಕೊಂಡಿದ್ದ ಈ ಹುಡುಗನೇಕೆ ಒಮ್ಮೆಯಾದರೂ ನನ್ನ ಕನಸಿನಲ್ಲಿ ಬಾರದೇ ಹೋದನೆಂದು ಅಚ್ಚರಿಯಾಯಿತು. ಆದರೆ ವಿಹಾರ್, ನನ್ನ ಪಾಲಿಗೆ ಮದುವೆಯೆಂಬುದು ಬೇರೆಯವರದಕ್ಕಿಂತ ತುಸು ಹೆಚ್ಚೇ ಕೊಂಡಿಗಳಿರುವ ಸಂಬಂಧದ ಸೂಕ್ಷ್ಮ ಎಳೆ ಕಣೋ. ಅದು ಕೇವಲ ಈಗಿರುವ ಪಿಜಿ ತೊರೆದು ಒನ್ ಬಿಎಚ್‌ಕೆ ಮನೆಗೆ ವರ್ಗವಾಗುವ ಸಂಗತಿಯಲ್ಲ. ಚಿಕ್ಕಂದಿನಿಂದಲೂ ನಾನು ಕಾಣದೇ ಹೋದ ಕುಟುಂಬ ವಾತಾವರಣದಲ್ಲಿ ಸೇರಿಕೊಳ್ಳುವುದು. ನನ್ನ ಹೊರತು ಬೇರಾರೂ ತನ್ನವರಿಲ್ಲದ ಅಮ್ಮನನ್ನೂ ಅದರೊಳಗೆ ಸೇರಿಸಿಕೊಳ್ಳುವುದು. ನಾನು ಕೇಳದೇ ಹೋದ, ಕಥೆ ಹೇಳುವ ಅಜ್ಜಅಜ್ಜಿಯರ ಪ್ರೀತಿಯನ್ನು ನನ್ನ ಮಗುವಿಗೆ ಒದಗಿಸಿಕೊಡುವುದು. ಈಗ ಅನಿಸುತ್ತಿದೆ... ನಾನು ಕಲ್ಪಿಸಿಕೊಂಡ ಆ ಬದುಕು ನನ್ನ ಎದುರೇ ಇತ್ತು. ಕೈ ಚಾಚಿದರೆ ಸಿಗುವಷ್ಟು ಸಮೀಪದಲ್ಲೇ ಸುಳಿದಾಡಿಕೊಂಡಿತ್ತು... ನಿನ್ನ ರೂಪದಲ್ಲಿ! ನಿನ್ನ ಹೆಸರಿನಲ್ಲಿ ನಾನು ಕಳೆದುಕೊಂಡ ಬಾಲ್ಯ, ಅಮ್ಮನ ಬದುಕಿನ ಸಂಜೆಗಳನ್ನು ಕಳೆಯಲಿಕ್ಕೆ ಆತ್ಮೀಯವಾದುದೊಂದು ಅಂಗಳ, ಹಾಗೂ ನನಗೆ ತಲೆಯಾನಿಸಿ ಬದುಕಲಿಕ್ಕೊಬ್ಬ ಪ್ರಾಮಾಣಿಕ ಗೆಳೆಯ ದೊರೆಯುವುದಾದರೆ ಈ ಸಂಬಂಧಕ್ಕೆ ನನ್ನ ಸಮ್ಮತಿಯಿದೆ. ಇನ್ನು ಮುಂದಿನದ್ದೆಲ್ಲ ನಿನ್ನ ಚಿತ್ತ."

ಹಿನ್ನೆಲೆಯಲ್ಲಿ ಮುಳುಗುತ್ತಿದ್ದ ಸೂರ್ಯನೀಗ ಅವಳ ಹಣೆಯ ಕುಂಕುಮದ ಬಣ್ಣಕ್ಕೇ ತಿರುಗಿದ್ದ. ದೇವಸ್ಥಾನದಲ್ಲಿ ಮುಡಿದ ಹೂವಿನ್ನೂ ಅವಳ ಮುಡಿಯಲ್ಲೇ ಇತ್ತು. ಈ ಸಂಜೆಯ ಹಿನ್ನೆಲೆಯಲ್ಲವಳು ಬೇರೆಯೇ ಆಗಿ ಕಾಣುತ್ತಿದ್ದಳು. ನನಗೆ ಹೇಳಲಿಕ್ಕೆ ಇನ್ನೇನೂ ಉಳಿದಿರಲಿಲ್ಲ. ಅವಳಾಡಿದ ಮಾತುಗಳಲ್ಲಿ ನನ್ನದೂ ಸೇರಿಹೋಗಿತ್ತು. ಮನಸ್ಸೀಗ ಹಗುರವಾಗಿತ್ತು. ಏನನ್ನೂ ಹೇಳದೆ ಅವಳ ಪಕ್ಕ ಕುಳಿತುಕೊಂಡೆ. ನಾನು ಹೇಳದ ಉತ್ತರ ಅವಳಿಗೆ ಅರ್ಥವಾದಂತೆ ಮೆಲ್ಲಗೆ ಹೆಗಲಿಗೆ ತಲೆಯಾನಿಸಿದಳು. ಹೆಸರು ಗೊತ್ತಿಲ್ಲದ ಹಕ್ಕಿಯೊಂದು ಎಲ್ಲೋ ಕುಳಿತು ಹಾಡುತ್ತಿತ್ತು.

ಅಷ್ಟರಲ್ಲಿ ಏನೋ ನೆನಪಾಗಿ ಥಟ್ಟನೆ ಕೇಳಿದಳು: "ಹೇ... ಮರೆತೇ ಬಿಟ್ಟಿದ್ದೆ. ನಿನ್ನೆ ನನ್ನ ಕಾಯಿಲೆಯ ಬಗ್ಗೆ ಹೇಳಿದೆನಲ್ಲಾ, ಅದರ ಬಗ್ಗೆ ನೀನೇನೂ ಕೇಳಲೇ ಇಲ್ಲಾ?"

"ಅದ್ಯಾವ ದೊಡ್ಡ ವಿಷಯ ಬಿಡು. ಸೇಪ್ಟಿಗೆ ಯಾವಾಗಲೂ ಎರಡು ಬಾಟಲಿ ನೀರು ಜೊತೆಗಿಟ್ಟುಕೊಂಡರಾಯಿತು..." ತಣ್ಣಗೆ ಉತ್ತರಿಸಿದೆ.

"ನಿನ್ನಜ್ಜೀ" ಎಂದು ಮುಖ ಕಿವುಚುತ್ತಾ ನನ್ನ ತೋಳು ಚಿವುಟಿ ನಕ್ಕಳು. ನಾನೂ ನಕ್ಕೆ. ಈ ನಗುವಿಗಾಗಿಯೇ ಕಾಯುತ್ತಿದ್ದನೇನೋ ಎಂಬಂತೆ ಸಂತೃಪ್ತನಾದ ಸೂರ್ಯ ಬೆಟ್ಟಗಳ ಹಿಂದೆ ಜಾರಿಹೋದ.

### ವಿನಾಯಕ ಅರಳಸುರಳಿ

ಊರು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೋಕಿನ ಅರಳಸುರಳಿ ಗ್ರಾಮ. ಕುವೆಂಪು ವಿಶ್ವವಿದ್ಯಾಲಯದ ಬಿ.ಕಾಂ. ಪದವೀಧರ. ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿ. ಕಥೆ ಹಾಗೂ ಕವನ ಸ್ಪರ್ಧೆಗಳಲ್ಲಿ ಪ್ರಶಸ್ತಿ ಪಡೆದಿದ್ದಾರೆ. ಕಥೆ, ಕವನ ಹಾಗೂ ಪ್ರಬಂಧಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.